# ಅನ್ನ–ಅಧ್ಯಾತ್ಮ

ಮಾನವೀಯತೆ ಎಂದರೇನು? ಈ ಪ್ರಶ್ನೆಗೆ ಉತ್ತರವಾಗಿ ಎರಡು ಮಾತುಗಳು ನೆನಪಿಗೆ ಬರುತ್ತವೆ. ಒಂದು, ಕಾರ್ಪೊರೇಷನ್ ಕಸದ ಲಾರಿಯನ್ನು ಹಾದುಹೋಗುವಾಗ ಮೂಗು ಮುಚ್ಚಿಕೊಳ್ಳಬಾರದು ಎನ್ನುವ ದು. ಸರಸ್ವತಿ ಅವರ ಮಾತು. ಇನ್ನೊಂದು, ಎ.ಎನ್. ಮೂರ್ತಿರಾವ್ ಅವರದ್ದು: ಅನಾಥ ಮಗುವಿನ ಎದುರು ಪೋಷಕರು ತಮ್ಮ ಮಗುವನ್ನು ಮುದ್ದಿಸಬಾರದು ಎನ್ನುವ ಮಾತು.

ಕಸ ಬಳಿಯುವ ಪೌರ ಕಾರ್ಮಿಕರ ಬಗ್ಗೆ ಸಹಾನುಭೂತಿ ಹಾಗೂ ಅವರ ವೃತ್ತಿ ಘನತೆಯ ಬಗ್ಗೆ ಗೌರವ ಹೊಂದುವುದು ಸಾಧ್ಯವಾದಾಗ, ಕಸದ ಲಾರಿಯ ಎದುರು ಮೂಗು ಮುಚ್ಚಿಕೊಳ್ಳಬಾರದು ಎನ್ನುವ ಪ್ರಜ್ಞೆ ನಮ್ಮದಾಗುತ್ತದೆ. ಕಸ ವಾಸನೆಯುಕ್ತ. ಅದರಲ್ಲಿ ನಾವು ಬಳಸಿ ಎಸೆದ ತ್ಯಾಜ್ಯಗಳಿರುತ್ತವೆ. ಆ ತ್ಯಾಜ್ಯ ಇರುಸುಮುರುಸಾಗಿ ಕಾಣಿಸಿ, ನಮಗರಿವಿಲ್ಲದೆಯೇ ಮೂಗು ಮುಚ್ಚಿಕೊಳ್ಳುತ್ತೇವೆ. ಹಾಗಾದರೆ, ಆ ಗಲೀಜನ್ನು ಬಳಿಯುವ ಪೌರಕಾರ್ಮಿಕರು ಮನುಷ್ಯರಲ್ಲವೆ? ಕಸದ ಕುರಿತ ನಮ್ಮ ವರ್ತನೆಯಲ್ಲಿ, ಪೌರ ಕಾರ್ಮಿಕರನ್ನು ನೀವು ಮನುಷ್ಯರಲ್ಲ ಎಂದು ಹೇಳುವ ಧ್ವನಿ ಇಲ್ಲವೆ? ಇದೇ ಜಿಜ್ಞಾಸೆ, ಪೋಷಕರ ವರ್ತನೆಗೆ ಸಂಬಂಧಿಸಿದಂತೆ ಮೂರ್ತಿರಾವ್ ಅವರು ಹೇಳಿದ ಮಾತಿನಲ್ಲೂ ಇದೆ. ಅನಾಥ ಮಗುವಿನ ತಬ್ಬಲಿತನವನ್ನು ಕಲ್ಪಿಸಿಕೊಳ್ಳುವ ಸಹೃದಯತೆ ನಮ್ಮದಾದರೆ, ಆ ಮಗುವಿನೆದುರು ನಮ್ಮ ಮಕ್ಕಳನ್ನು ಮುದ್ದಿಸುವುದರ ಹಿಂದಿನ ಕ್ರೌರ್ಯ ಅರ್ಥ ಮಾಡಿಕೊಳ್ಳುವುದು ಕಷ್ಟವೇನಲ್ಲ. ಬಹಿರಂಗದ ವರ್ತನೆಗಳಲ್ಲಾದರೂ ಮನುಷ್ಯರಾಗಿ ಉಳಿಯುವುದು ಸುಲಭವೇನಲ್ಲ.

ಕಸದ ಲಾರಿಯ ಎದುರು ಮೂಗು ಮುಚ್ಚಿಕೊಳ್ಳುವುದು ಹಾಗೂ ತಬ್ಬಲಿಗಳೆದುರು ನಮ್ಮ ಮಕ್ಕಳನ್ನು ಮುದ್ದಿಸುವ ಕ್ರಿಯೆಗಳನ್ನು ತರ್ಕ ಹಾಗೂ ವಾಸ್ತವದ ನೆಲೆಗಟ್ಟಿನಲ್ಲಿ ಸಮರ್ಥಿಸಿಕೊಳ್ಳಲು ಸಾಧ್ಯವಿದೆ. ಆದರೆ, ಮಾನವೀಯತೆ ತರ್ಕಕ್ಕೆ ಸಂಬಂಧಿಸಿದ್ದಲ್ಲ, ಅದು ಹೃದಯವಂತಿಕೆಗೆ ಸಂಬಂಧಿಸಿದ್ದು. ನಮ್ಮ ನಡೆ–ನುಡಿಯಿಂದ ಮತ್ತೊಬ್ಬರಿಗೆ ಕೆಡುಕಾಗದಂತೆ ಎಚ್ಚರ ವಹಿಸುವುದು ಮಾತ್ರವಲ್ಲ, ಅಪ್ರಜ್ಞಾಪೂರ್ವಕವಾಗಿ ಕೂಡ ಇತರರನ್ನು ನೋಯಿಸದಂತೆ, ಅವಮಾನಿಸದಂತೆ ನಡೆ–ನುಡಿಗಳನ್ನು ಅಣಿಗೊಳಿಸಿಕೊಳ್ಳಬೇಕು.

ಹಿಂಸೆ ಕ್ರಿಯೆಯಲ್ಲಷ್ಟೇ ಇರುವುದಿಲ್ಲ; ಮನಸ್ಸಿನ ಕಲ್ಪನೆಯೂ ಹಿಂಸೆಯಾಗಬಲ್ಲದು ಎನ್ನುವ ಅರ್ಥದಲ್ಲಿ ಜೈನಧರ್ಮ 'ಸಂಕಲ್ಪಹಿಂಸೆ' ಎನ್ನುವ ಪರಿಕಲ್ಪನೆ ಪ್ರತಿಪಾದಿಸಿದೆ. ಈ ಸಂಕಲ್ಪಹಿಂಸೆಯನ್ನು ಮಾನವೀಯತೆಗೆ ಸಂಬಂಧಿಸಿದಂತೆ ಅನ್ವಯಿಸಿಕೊಳ್ಳಬಹುದು. ನಮ್ಮ ಒಳ್ಳೆಯತನ ಕ್ರಿಯೆಗಷ್ಟೇ ಸಂಬಂಧಿಸಿದ್ದಲ್ಲ; ಅದು ಮನಸ್ಸಿನ ಭಾವಕ್ಕೂ ಸಂಬಂಧಿಸಿದ್ದು.

ಸಾಮಾಜಿಕ ತರತಮ ನಮ್ಮ ನಡೆಗಳಲ್ಲಿ ಎಷ್ಟರಮಟ್ಟಿಗೆ ಹಾಸುಹೊಕ್ಕಾಗಿದೆ ಎನ್ನುವುದನ್ನು ತಿಳಿಯಲು ಆಹಾರದ ಬಗೆಗಿನ ನಂಬಿಕೆಗಳನ್ನು ಪರಿಶೀಲಿಸಬಹುದು. ಪುರಾಣ ಹಾಗೂ ಜನಪದ ಕಥೆಗಳಲ್ಲಿ 'ಆಹಾರ ಪಾವಿತ್ರ್ಯ'ದ ಪ್ರಸಂಗಗಳನ್ನು ನೆನಪಿಸಿಕೊಳ್ಳಿ. ಗುರುವೊಬ್ಬನ ಮಹಿಮೆಯನ್ನು ಪರೀಕ್ಷಿಸಲಿಕ್ಕೆ, ಮುಚ್ಚಿದ ಹರಿವಾಣದಲ್ಲಿ ಮಾಂಸಾಹಾರ ನೀಡುವುದು; ಗುರುಗಳ ಕರಸ್ಪರ್ಶದಿಂದ ಆ ಮಾಂಸ ಹೂವೋ ಹಣ್ಣೋ ಆಗುವುದು; ಆ ಜಾದೂವಿನಿಂದ ಪರೀಕ್ಷಿಸಲು ಬಂದವರು ಗುರುಮಹಿಮೆಗೆ ತಲೆಬಾಗುವುದು – ಇಂಥ ಕಥೆಗಳನ್ನು ಓದಿಯೋ ಕೇಳಿಯೋ ಇರುತ್ತೇವೆ. ಸಾವಧಾನದಿಂದ ನೋಡಿದರೆ, ಈ ಕಥೆಗಳು ಪರೋಕ್ಷವಾಗಿ ಆಹಾರದ 'ಶ್ರೇಷ್ಠತೆಯ ವ್ಯಸನ'ದ ಪ್ರತಿಫಲಗಳೇ ಆಗಿವೆ. ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞಾಪೂರ್ವಕವಾಗಿಯೋ ಸಾಮಾಜಿಕ ತರತಮಗಳನ್ನು ಪೋಷಿಸಲು ಇಂಥ ಕಥನಗಳು ಚಾಲ್ತಿಯಲ್ಲಿರುತ್ತವೆ. ಗುರುಗಳನ್ನು ಪರೀಕ್ಷಿಸಲು ಮಾಂಸಾಹಾರ ನೀಡುವ ವ್ಯಕ್ತಿಯ ವ್ಯಕ್ತಿತ್ವದ ಟೊಳ್ಳುತನವನ್ನು ಹೇಳಲು ಪ್ರಯತ್ನಿಸುವ ಈ ಕಥೆಗಳು, ಪರೋಕ್ಷವಾಗಿ, ಮಾಂಸಾಹಾರವನ್ನು ಹೂವಾಗಿಸುವ ಮೂಲಕ ತನ್ನ ಮಹಿಮೆಯನ್ನು ಸಾಬೀತುಪಡಿಸುವ ಮಹಿಮಾವಂತರ ಟೊಳ್ಳು ವ್ಯಕ್ತಿತ್ವವನ್ನೂ ಬೆಟ್ಟು ಮಾಡಿ ತೋರಿಸುತ್ತಿರುತ್ತವೆ. ಈ ಕಥೆಗಳಲ್ಲಿ ಎರಡು ಸೂಕ್ಷ್ಮ ವಿಚಾರಗಳಿವೆ. ಒಂದು, ಮಾಂಸಾಹಾರ ಕೀಳು ಎನ್ನುವ ಅಭಿಪ್ರಾಯವನ್ನು, ಮಾಂಸಾಹಾರಿಗಳ ಮೂಲಕವೇ ಪ್ರತಿಪಾದಿಸುತ್ತಿರುವುದು. ಎದುರಾಳಿಯ ಹೃದಯ ಹೂವಾಗಬೇಕು ಎನ್ನುವುದು ಅಪೇಕ್ಷಣೀಯ. ಆದರೆ, ಆ ರೂಪಾಂತರ ಸಾಧ್ಯವಾಗಬೇಕಾದುದು ಲೀಲಾವಿನೋದದ ಮೂಲಕವಲ್ಲ; ಹೃದಯವಂತಿಕೆಯಿಂದ ಎನ್ನುವುದು ಎರಡನೇ ಸೂಕ್ಷ್ಮ. ಬುದ್ಧ, ಯೇಸು, ಮಹಾವೀರ, ಬಸವಣ್ಣ, ಗಾಂಧಿ ಸೇರಿದಂತೆ ಎಲ್ಲ ಮಹಾತ್ಮರನ್ನೂ ಮಾನವೀಯ ಜಗತ್ತು ನೆನಪಿಸಿಕೊಳ್ಳುವುದು ಅವರ ಲೀಲೆಗಳಿಂದ, ಹೃದಯವಂತಿಕೆಯಿಂದ. ಅವರು ಜನಸಮೂಹವನ್ನು ಮುಟ್ಟಿದ್ದು ಹೃದಯಸಂವಾದದ ಮೂಲಕವೇ ಹೊರತು, ಸಿದ್ಧಿಯ ಸಮ್ಮೋಹನದಿಂದಲ್ಲ. ಮಹಿಮೆಯ ಮೂಲಕ ಎದುರಾಳಿಯನ್ನು ಮಣಿಸಲು ಪ್ರಯತ್ನಿಸುವವರು ಎಷ್ಟೇ ದೊಡ್ಡವರಾದರೂ, ಅವರು ಅನುಕಂಪಕ್ಕೆ ಅರ್ಹರು.

ಅನೇಕ ಸಂದರ್ಭಗಳಲ್ಲಿ ನಮಗೆ ಒಗ್ಗದ ಆಹಾರದ ಬಗ್ಗೆ ಲಘುವಾಗಿ ಮಾತನಾಡುತ್ತೇವೆ. ನಮ್ಮ ಮಾತುಗಳು ನಮ್ಮ ವ್ಯಕ್ತಿತ್ವದ ಲಘುತನವನ್ನು ಸೂಚಿಸುತ್ತಿರುತ್ತವೆಯೇ ಹೊರತು, ಆಹಾರದ ಗುಣವನ್ನಲ್ಲ. ನಮಗೆ ಒಗ್ಗದ ಆಹಾರ ಇನ್ನೊಬ್ಬರಿಗೆ ಪ್ರಿಯವಾದುದು ಆಗಿರಬಹುದೆನ್ನುವ ಸಾಮಾನ್ಯಜ್ಞಾನ ಇಲ್ಲದೆಹೋದಾಗ, ನಮ್ಮ ಮಾತುಗಳು ಮನುಷ್ಯವಿರೋಧಿಯ ಧ್ವನಿ ಪಡೆದುಕೊಳ್ಳುತ್ತವೆ.

ಧ್ಯಾನ, ತಪ, ದೇಹದಂಡನೆ, ವ್ರತಾಚರಣೆ ಅಥವಾ ಪೋಷಾಕು – ಇವೆಲ್ಲವೂ ಅಧ್ಯಾತ್ಮದ ಸಾಧನೆಯ ಹಾದಿಯಲ್ಲಿ ಅನುಕೂಲಕರ ಸಂಗತಿಗಳೇ ಹೊರತು, ಸಿದ್ಧಿಯ ಸಂಕೇತಗಳಲ್ಲ. ಅಧ್ಯಾತ್ಮದ ಸಾಧನೆ ಇರುವುದು, ನಾವು ಎಷ್ಟರಮಟ್ಟಿಗೆ ಮನುಷ್ಯರಾಗಿದ್ದೇವೆ ಎನ್ನುವುದರಲ್ಲಿ. ಮಾನವೀಯತೆಯೊಂದಿಗಿನ ಅನುಸಂಧಾನವೇ ಅಧ್ಯಾತ್ಮ ಎನ್ನುವ ಸರಳ ಸತ್ಯವನ್ನು ಅರ್ಥ ಮಾಡಿಕೊಂಡರೆ, ನಮ್ಮ ಬದುಕು ತಿಳಿಯಾಗುತ್ತದೆ, ಸಮಷ್ಟಿಯ ಆರೋಗ್ಯವೂ ಸುಧಾರಿಸುತ್ತದೆ. ವಿಪರ್ಯಾಸ ನೋಡಿ: ಅಧ್ಯಾತ್ಮದ ಬಗ್ಗೆ ದೊಡ್ಡ ದೊಡ್ಡ ಮಾತುಗಳನ್ನಾಡುವ ನಮಗೆ, ಆಹಾರದ ಮೇಲಿನ ಮೋಹವನ್ನು ಮೀರುವುದು ಸಾಧ್ಯವಾಗುವುದಿಲ್ಲ. ಆಹಾರದ ಮೋಹ ಎಂದರೆ ರುಚಿಯ ಮೋಹ; ಆಹಾರದಲ್ಲಿ ಉತ್ತಮ ಮತ್ತು ಅಧಮ ಎಂದೆಣಿಸುವ ಮನೋಭಾವ. ಶ್ರೇಷ್ಠತೆಯ ವ್ಯಸನ ಉಳಿಸಿಕೊಂಡರೆ, ಮಾನವೀಯತೆಯೂ ಮುಕ್ಕಾಗುವುದು, ಅಧ್ಯಾತ್ಮದ ದಾರಿಯೂ ಮುಚ್ಚಿಕೊಳ್ಳುವುದು.

■ **ಚಂಪಕಮಾಲಾ**

## ಮಾತೇ ಮುತ್ತು

- ಕುದಿಯುತ್ತಿರುವ ನೀರು ಕೂಡ ಬೆಂಕಿಯನ್ನು ಆರಿಸಿಯೇ ಬಿಡುತ್ತದೆ.
  –ಪಂಚತಂತ್ರ
- ಹಣ ಎಂಬುದು ಗೊಬ್ಬರ ಇದ್ದಂತೆ. ಗುಡ್ಡೆ ಹಾಕಿಟ್ಟರೆ ದುರ್ನಾತ ಬೀರುತ್ತದೆ. ಹರಡಿದರೆ ಬೆಳೆಯುತ್ತಾ ಹೋಗುತ್ತದೆ.
  –ಜೆ.ಆರ್.ಡಿ. ಟಾಟಾ
- ಮಾನವನ ದೇಹದಲ್ಲಿರುವ ಆತ್ಮವೊಂದೇ ಪೂಜೆಗೆ ಅರ್ಹವಾದ ದೇವರು.
  –ಸ್ವಾಮಿ ವಿವೇಕಾನಂದ
- ಕನಿಕರದ ಅತಿರೇಕ ನಿರರ್ಥಕ ಅವಿವೇಕ
  –ಎಸ್.ವಿ. ರಂಗಣ್ಣ
- ಮನುಷ್ಯ ಬದುಕುವುದು ಕೇವಲ ಹಣದಿಂದ ಅಲ್ಲ, ಬಡತನದ ಸರಳತೆಯಿಂದ ಅಲ್ಲ, ಅಧಿಕಾರದಿಂದ ಅಲ್ಲ, ಐಶ್ವರ್ಯದಿಂದ ಅಲ್ಲ, ಅವನ ಜೀವ ಉಳಿಯುವುದು ಅವನ ಸೃಷ್ಟಿಗೆ ಅರ್ಥ ಬರುವುದು ಹಲವು ಬಗೆಯ ಕಾಳಜಿಯಿಂದ ಅವುಗಳಲ್ಲಿ ಒಂದು ಪ್ರೀತಿ.
  –ಪಿ. ಲಂಕೇಶ್
- ಮನಸ್ಸಿನ ವಿಕಾಸವು ಮಾನವನ ಅಸ್ತಿತ್ವದ ಅಂತಿಮ ಗುರಿಯಾಗಿರಬೇಕು.
  –ಬಿ.ಆರ್. ಅಂಬೇಡ್ಕರ್